ಸರಕಾರದವರು ಈ ಬಗ್ಗೆ ಕೂಡಲೇ ಮೇಲ್ಕಂಡ ಸಿಬ್ಬಂದಿ ವರ್ಗದವರನ್ನು ಅಮಾನತ್ತಿನಲ್ಲಿಡಿಸಿ ತನಿಖೆ ನಡೆಸ ಬೇಕೆಂದೂ ಇನ್ನೂ ಇತರ ಕಂಪನಿಗಳಿಂದಲೂ ಈ ರೀತಿಯಾಗಿ ಮದ್ಯ ಹೊರಗೆ ಹೋಗಂತ್ತಿದೆಯೇ ಎಂಬ ಬಗ್ಗೆಯೂ ತನಿಖೆ ಮಾಡಿಸಬೇಕೆಂದು ಸರಕಾರವನ್ನು ಒತ್ತಾಯಿಸಿ ಪಡಿಸುತ್ತೇನೆ.

ಶ್ರೀ ಬಿ. ಎ. ಜೀವಿಜಯ — ಮಾನ್ಯ ಆಬಕಾರಿ ಮಂತ್ರಿಗಳ ಪರವಾಗಿ ಹೇಳಿಕೆಯನ್ನು ಓದುತ್ತೇನೆ ಮಾನ್ಯ ಅಧ್ಯಕ್ಷರೇ ಕಾರ್ಖಾನೆಗಳಿಂದ ಮದ್ಯವು ಮುಂದಿನ ಸರಬರಾಜಿಗೆ ಉಗ್ರಾಣಕ್ಕೆ ಹೋಗಬೇಕಾದರೆ ಈ ಹಂತದಲ್ಲಿ ಶುಲ್ಕವನ್ನು ವಸೂಲು ಮಾಡಲಾಗುವುದಿಲ್ಲ. ಶುಲ್ಕವನ್ನು ವಸೂಲು ಮಾಡುವ ಕಾರ್ಯವನ್ನು ಉಗ್ರಾಣದಿಂದ ಮದ್ಯ ಬಿಡುಗಡೆಯಾಗುವ ಕಾಲಕ್ಕೆ ವಸೂಲು ಮಾಡಲಾಗುವುದು. ಉಗ್ರಾಣದಿಂದ ಮದ್ಯವನ್ನು ಸಗಟು ಮದ್ಯ ಮಾರಾಟ ಮಾಡುವ ಮಳಿಗೆಗಳಿಗೆ ಬಿಡುಗಡೆ ಮಾಡಲಾಗುವುದು. ಈ ಹಂತದಲ್ಲಿ ಮಧ್ಯದ ಮೇಲೆ ಶುಲ್ಕ ಮತ್ತು ತೆರಿಗೆಗಳನ್ನು ವಸೂಲಿ ಮಾಡಲಾಗುವುದು. ಮದ್ಯದ ಉಗ್ರಾಣದಿಂದ ಸಗಟು ಮದ್ಯ ಮಾರಾಟ ಮಳಿಗೆಗಳಿಗೆ ಮದ್ಯವನ್ನು ಬಿಡುಗಡೆ ಮಾಡಬೇಕಾದರೆ ಮದ್ಯದ ಮೇಲೆ ಶುಲ್ಕ ಮತ್ತು ತೆರಿಗೆಗಳನ್ನು ವಸೂಲು ಮಾಡಿದ ನಂತರ ರಹದಾರಿ ಪರವಾನಿಗೆಯನ್ನು ಕೊಡಲಾಗುವುದು ರಹದಾರಿ ಪರವಾನಿಗೆಯಲ್ಲಿ ಶುಲ್ಕವನ್ನು ಮತ್ತು ಇತರ ತೆರಿಗೆಯ ವಸೂಲಾತಿಯ ಚಲನೆ ಕ್ರಮ ಸಂಖ್ಯೆ ದಿನಾಂಕ ಮತ್ತು ಹಣ ಕಟ್ಟಿರುವ ಸ್ಥಳವನ್ನು ಸಮೂಹಿಸಲಾಗುವುದು. ಸಗಟು ಮಾರಾಟ ಮಳಿಗೆಯಿಂದ ಮದ್ಯದ ಚಿಲ್ಲರೆ ಮಾರಾಟ ಮಾಡುವ ಮಳಿಗೆಗಳಿಗೆ ಮತ್ತು ಬಾರ್‌ಗಳಿಗೆ ಮದ್ಯವನ್ನು ಬಿಡುಗಡೆ ಮಾಡುವುದು ಇನ್ನೊಂದು ಹಂತ. ಈ ರೀತಿ ಬಿಡುಗಡೆಯಾಗುವ ಮದ್ಯದ ರಹದಾರಿ ಪರವಾನಿಗೆಯನ್ನು ಪಡೆದು ಸಗಟು ಸನ್ನದುದಾರನು ಚಿಲ್ಲರೆ ಮಾರಾಟ ಮಾಡುವ ಮತ್ತು ಬಾರ್‌ಗಳಿಗೆ ಬಿಡುಗಡೆ ಮಾಡುವರು. ಈ ಹಂತದಲ್ಲಿ ಲೀಟರ್ ಫೀ ಮತ್ತು ಇತರ ತೆರಿಗೆಗಳನ್ನು ವಸೂಲಿ ಮಾಡಿ ರಹದಾರಿ ಪರವಾನಿಗೆಗಳಲ್ಲಿ ಸಮೂಹಿಸ ಪರವಾನಿಗೆಯನ್ನು ಕೊಡಲಾಗುವುದು. ಈ ರೀತಿ ರಹದಾರಿ ಪರವಾನಿಗೆ ಸದರಿ ಲೀಟರ್ ಫೀ ಹಣ ತೆರಿಗೆ ಕಟ್ಟಿದ ಹಣ ಚಲನೆ ಕ್ರಮಸಂಖ್ಯೆ ದಿನಾಂಕವನ್ನು ಒಳಗೊಂಡಿರುವುದು.

ಮೇಲ್ಕಾಣಿಸಿದ ಎರಡು ಹಂತದಲ್ಲಿ ಕೊಡತಕ್ಕಂಥ ರಹದಾರಿ ಪರವಾನಿಗೆ ಮಹತ್ವದ ಪಾತ್ರವನ್ನು ಹೊಂದಿರುವುದು ರಹದಾರಿ ಪರವಾನಿಗೆ ಮದ್ಯ ಮಾರಾಟ ಮಾಡುವವರ ಹೆಸರು ವಿಳಾಸ ಮತ್ತು ಮದ್ಯ ಕೂಡುಕೊಳ್ಳುವವರ ಹೆಸರು ವಿಳಾಸವನ್ನು ಮದ್ಯವನ್ನು ಸಾಗಿಸುವ ಪರಿಮಾಣ ಪಟ್ಟಿಗೆಗಳ ಸಂಖ್ಯೆಮದ್ಯದ ಶಕ್ತಿ ಲೀಟರ್ ಫೀ ಚಲನ್ ಕ್ರಮ ಸಂಖ್ಯೆಗಳನ್ನು ಒಳಗೊಂಡಿರುವುದು. ಆದ್ದರಿಂದ ರಹದಾರಿ ಪತ್ರ. ಮದ್ಯವನ್ನು ಸಾಗಿಸುವ ಮತ್ತು ಅಧಿಕಾರಿಯಂತ್ರ ದಾಖಲೆಯಾಗಿರುತ್ತದೆ ರಹದಾರಿ ಪತ್ರ ಚಲನ್ ಕ್ರಮ ಸಂಖ್ಯೆ ಮತ್ತು ಶುಲ್ಕ ಲೀಟರ್ ಫೀ ಸರಕಾರಕ್ಕೆ ಸಂದಾಯವಾದ ದಾಖಲಾತಿಯನ್ನು ಸೂಚಿಸುವುದು ಮದ್ಯದ ಉತ್ಪಾದನೆಯಿಂದ ಚಿಲ್ಲರೆ ಮಾರಾಟವಾಗುವವರೆಗೆ ಇಲಾಖೆಯ ಅಧೀನಕ್ಕೆ ಒಳಪಟ್ಟಿರುತ್ತದೆ. ಮೇಲ್ಕಾಣಿಸಿದ ಪ್ರಶ್ನೆಯಲ್ಲಿ ತಿಳಿಸಿರುವಂತೆ ಇಂತಹ ಯಾವ ಪ್ರಕರಣಗಳು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲವಾದ್ದರಿಂದ ಯಾವುದೇ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡುವ ಪ್ರಶ್ನೆ ಉದ್ಭವಿಸುವುದಿಲ್ಲ.

೬. ಗೋಕರ್ಣದ ಕೋಟಿತೀರ್ಥ ಮಲಿನಗೊಂಡು ರೋಗದ ತಾಣವಾಗಿರುವುದು

೨-೦೦ ಪಿ. ಎಂ.

ಶ್ರೀ ಎನ್. ಹೆಚ್. ಗೌಡ (ಕುಮಟಾ).—ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಗೋಕರ್ಣ, ಪುರಾಣ ಪ್ರಖ್ಯಾತ ಸ್ಥಳವಾಗಿದ್ದು, ಪವಿತ್ರ ಕ್ಷೇತ್ರವೂ, ಭೂ ಕೈಲಾಸವೂ ಎಂದು ಹೆಸರಾಗಿದೆ. ಭಾರತದಿಂದ ಅಷ್ಟೇ ಅಲ್ಲ, ಪ್ರಪಂಚದ ಮೂಲೆ ಮೂಲೆಗಳಿಂದ ಈ ಪುಣ್ಯ ಕ್ಷೇತ್ರದ ಸಂದರ್ಶನಕ್ಕಾಗಿ ಪರಿಶಿವನ ದರ್ಶನಕ್ಕಾಗಿ ತಂಡೋಪತಂಡವಾಗಿ ಗೋಕರ್ಣಕ್ಕೆ ಬರುವ ಪುಣ್ಯ ಯಾತ್ರಿಕರು ಇದನ್ನು ಪರಮ ಪುಣ್ಯ ತೀರ್ಥವೆಂದು ಖ್ಯಾತಿವೆತ್ತ ಕೋಟಿ ತೀರ್ಥವೆಂಬ ವಿಶಾಲ ಸರೋವರದಲ್ಲಿ ಮಿಂದು ಪುನೀತರಾದೆವೆಂದು ಭಾವಿಸಿ, ಭ್ರಮಾಲೋಕದಲ್ಲಿ ವಿಹರಿಸುತ್ತಾ, ತಮ್ಮ ಮೂಲ ಸ್ಥಾನಗಳಿಗೆ ಹಿಂದಿರುಗುತ್ತಾರೆ. ಆದರೆ ದುರ್ದೈವದ ಸಂಗತಿ ಎಂದರೆ, ಪುಣ್ಯ ತೀರ್ಥ ವೆಂದು ಪ್ರಸಿದ್ಧವಾದ ಈ ಕೋಟಿ ತೀರ್ಥದಲ್ಲಿ ದಿನಂಪ್ರತಿ ಸಹಸ್ರ ಸಹಸ್ರ ಜನರು ಮಿಂದು ಬೆವ್ವ ಒಗೆದು ಮಲಿನಗೊಳ್ಳುವುದರಿಂದ ಅದು ಅನೇಕಾಲು ಮುಂತಾದ ರೋಗದ ತಾಣವಾಗಿ ಮನೆಯಾಗಿದೆ.

ಇದರ ಅರಿವು ಇರುವ ಗೋಕರ್ಣ ಮಂತ್ತು ಸುತ್ತಮುಂತ್ತಲಿನ ಹಳ್ಳಿಗಳ ಜನರು ಭೀತರಾಗಿ ಚಡಪಡಿಸುತ್ತಿದ್ದಾರೆ, ಕಳೆದ ಅಧಿವೇಶನದಲ್ಲಿ ಈ ಜ್ವಲಂತ ಸಮಸ್ಯೆಯ ಕುರಿತು ಸದನದಲ್ಲಿ ಪ್ರಸ್ತಾಪಿಸಿ, ಸರಕಾರದ ಗಮನವನ್ನು ಸೆಳೆದಾಗ್ಯೂ, ಸರಕಾರ ಇಲ್ಲಿಯವರೆಗೆ ಯಾವುದೇ ಕ್ರಮವನ್ನು ಕೈಗೊಳ್ಳದೇ ಇರುವುದು ಜನತೆಯನ್ನು ವಿವಂಚನೆಗೊಳಪಡಿಸಿದೆ. ಈಗಲಾದರೂ ಗೋಕರ್ಣದ ಜನರನ್ನು ಆಪ್ಪೇ ಅಲ್ಲ, ಅಲ್ಲಿಗೆ ಬಂದು ಹೋಗುವ ಮುಗ್ಧ ಯಾತ್ರಿಕರನ್ನೆಲ್ಲಾ, ಭೀಕರ ರೋಗಗಳ ದವಡೆಯಿಂದ ಪಾರು ಮಾಡಲು ಕೋಟಿ ತೀರ್ಥವನ್ನು ನಿರ್ಮಲಗೊಳಿಸುವ ತೀವ್ರ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ನಗರಾಭಿವೃದ್ಧಿ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಹೆಲ್ತ್ ಮಿನಿಸ್ಟರ್‌ರವರು ಸಭೆಯಲ್ಲಿ ಇಲ್ಲ ಅವರಿಂದ ವರದಿಯನ್ನು ತರಿಸಿ, ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತೇನೆ.

(೭) ಗೋಲುಗುಂಬಸ್‌ದ ಆವರಣದಲ್ಲಿದ್ದ ಹಿತ್ತಾಳೆ ದೀಪದ ಕಂಬಗಳು ಕಳುವಾಗಿರುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ, ಬಿಜಾಪುರ ನಗರದಲ್ಲಿಯ ಸುಪ್ರಸಿದ್ಧ ಗೋಲಗುಂಬಸ್‌ದ ಆವರಣದಲ್ಲಿರುವ ೧೬ನೇ ಶತಮಾನದ ಇಪ್ಪತ್ತಾರು ಹಿತ್ತಾಳೆ ದೀಪದ ಕಂಬಗಳು ಕಳುವಾಗಿದೆಯೆಂದು ತಿಳಿದುಬಂದಿರುತ್ತದೆ. ಭಾರತೀಯ ಪ್ರಾಚ್ಯ ವಸ್ತು ಸಂರಕ್ಷಣಾ ಇಲಾಖೆಯ ಉಪರಕ್ಷಣಾಧಿಕಾರಿಗಳು ಈ ದೂರನ್ನು ನೀಡಿದ್ದು, ಈ ದೀಪದ ಕಂಬಗಳು ಯಾರಿಂದ ಕಳವು ಮಾಡಲಾಗಿದೆ ಹಾಗೂ ಈ ದೀಪದ ಕಂಬಗಳನ್ನು ಇಷ್ಟೊಂದು ನಿರ್ಲಕ್ಷತೆಯಿಂದ ಇಟ್ಟಿದ್ದು ಎಲ್ಲಿ ? ಈ ಎಲ್ಲಾ ವಿಷಯಗಳ ಬಗ್ಗೆ ವಿಶೇಷ ವರದಿ ನೀಡುವಂತೆ ಪ್ರವಾಸೋದ್ಯಮ ಹಾಗೂ ಯುವಜನ ಇಲಾಖಾ ಮಂತ್ರಿಗಳ ಗಮನವನ್ನು ಸೆಳೆಯಲಾಗಿದೆ.

ಭಾರತೀಯ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿಯ ಸಂರಕ್ಷಣಾ ವಿಭಾಗದ ಬಗ್ಗೆ ವಿಶೇಷ ಗಮನ ಸೆಳೆಯುತ್ತಾ, ಪ್ರಾಚೀನ ವಸ್ತುಗಳನ್ನು ಸಂರಕ್ಷಣೆ ಮಾಡುವುದರಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂತೆ ಕೇಂದ್ರ ಸರಕಾರದ ಸಂಬಂಧಪಟ್ಟ ಇಲಾಖೆಗೆ ತೀವ್ರ ಸಂಪರ್ಕಿಸಬೇಕಾಗಿ ಕೇಳಿಕೊಳ್ಳುತ್ತೇವೆ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೇ, ಕಳ್ಳತನ ಆಗಿರುವುದರ ಬಗ್ಗೆ ವಿಚಾರಣೆ ಮಾಡಿಸುತ್ತೇನೆ. ಮೈಸೂರು ಅರಮನೆಗೆ ಸಂಬಂಧಪಟ್ಟ ಪ್ರಾಚ್ಯ ವಸ್ತು ವಿಷಯದಲ್ಲೂ ಸಹ ಕೇಂದ್ರ ಸಿ.ಬಿ.ಐ.ನವರು ತನಿಖೆ ನಡೆಸುತ್ತಿದ್ದಾರೆ ಎಂದು ಹೇಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನಾನು ಕೇಳಿದ್ದುದು ಮೈಸೂರಿನ ಬಗ್ಗೆ ಅಲ್ಲ, ಬಿಜಾಪುರದ ವಿಚಾರ.

ಶ್ರೀ ಬಿ. ರಾಚಯ್ಯ.—ಅದನ್ನು ವಿಚಾರಣೆ ಮಾಡಿಸುತ್ತೇನೆ ಎಂದು ಹೇಳಿದ್ದೇನೆ.

(೮) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸತತವಾಗಿ ದರೋಡೆಗಳು ನಡೆದು ಹಲ್ಲೆಗೊಳಗಾದವರಿಗೆ ಪರಿಹಾರ ನೀಡುವುದು,

ಶ್ರೀ ಬಿ. ಎ. ಉಮ್ಮರಬ್ಬ (ವಿಟ್ಲ).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಸತತ ದರೋಡೆಗಳು ನಡೆದು ಇಡೀ ಜಿಲ್ಲೆಯ ಜನರು ತತ್ತರಿಸಿದ ದಿನಗಳು ಕಳೆದು ಅತ್ಯಂತ ದಕ್ಷತೆಯ ಪೋಲೀಸರ ಕಾರ್ಯಾಚರಣೆಯಿಂದಾಗಿ, ದರೋಡೆಕೋರರ ತಂಡದ ಬಂಧನವಾಗಿ, ಈಗ ಪೋಲೀಸರನ್ನು ಅಭಿನಂದಿಸುವ ದಿನಗಳು ಪ್ರಾರಂಭವಾಗಿರುವುದು ಸಂತೋಷದ ವಿಷಯ. ಜಿಲ್ಲೆಯ ಜನರು ಸುಖ ಶಾಂತಿಯಿಂದ ನಿದ್ದೆ ಮಾಡುವ ನೆಮ್ಮದಿಯನ್ನು ಪಡೆದಿದ್ದಾರೆ. ದರೋಡೆಕೋರರ ಹೀನಕೃತ್ಯಗಳ ಕಥೆಗಳು ಪ್ರತಿದಿನ ಪತ್ರಿಕೆಗಳಲ್ಲಿ ಆಲೆ ಆಲೆಯಾಗಿ ಬರುತ್ತಿದ್ದು, ಎಲ್ಲರೂ ಕುತೂಹಲದಿಂದ ಅದನ್ನು ಓದುತ್ತಿದ್ದಾರೆ. ಆದರೆ ಈ ಎಲ್ಲಾ ಅಬ್ಬರದ ನಡುವೆ ವಿಷಾದನೀಯ ಉದಾಹರಣೆ ಬಂಟವಾಳದ ಸುಂದರಮೂಲ್ಯರ ಕುಟುಂಬಸ್ಥರ ಕಣ್ಣೀರು ಅಸಹನೀಯ.